

ನಮಗೇನು ಗೊತ್ತು? ಅವಳೊಡನೆ ಹೊರಟೆವು.

ನಿಮಗೆ ಗೊತ್ತಿದೆಯೋ, ಇಲ್ಲವೋ ಸ್ವಲ್ಪದರಲ್ಲಿ ಹೇಳಿಬಿಡುತ್ತೇನೆ. ವಿನೋಬಾ ಅವರು ಗಾಂಧೀಜಿಯ ಸಾಬರಮತಿ ಸತ್ಯಾಗ್ರಹಾಶ್ರಮದಲ್ಲಿ ಇದ್ದರಷ್ಟೆ. ಆ ಆಶ್ರಮದ ಅತ್ಯಂತ ಕಿರಿಯ ಸದಸ್ಯಳಾಗಿದ್ದರಂತೆ ಲಕ್ಷ್ಮಕ್ಕ. ಆಶ್ರಮದ ಎಲ್ಲ ಕೆಲಸಗಳನ್ನೂ ಪವಿತ್ರವೆಂದು ತಿಳಿದು ಮಾಡುತ್ತಿದ್ದರು ವಿನೋಬಾ. ಮುಂದೆ ಜಮನಾಲಾಲ್ ಬಜಾಜ್ ಅವರು ವರ್ಧಾದಲ್ಲಿ ಸತ್ಯಾಗ್ರಹಾಶ್ರಮದ ಶಾಖೆ ಪ್ರಾರಂಭಿಸಲು ಬಯಸಿದರು. ಗಾಂಧೀಜಿಯ ಅಪ್ಪಣೆಯಂತೆ ವಿನೋಬಾ, ನಾಲ್ಕು ವಿದ್ಯಾರ್ಥಿಗಳು ಮತ್ತು ಒಬ್ಬ ಜೊತೆಗಾರನೊಡನೆ ಹೊಸ ಆಶ್ರಮಕ್ಕೆ ಬಂದರು. ಅಲ್ಲಿದ್ದಾಗಲೂ ಗ್ರಾಮಸೇವೆಗಾಗಿ ಅಕ್ಕಪಕ್ಕದ ಹಳ್ಳಿಗಳಿಗೆ ಹೋಗುವುದನ್ನು ಅವರು ಮುಂದುವರಿಸಿದರು. ದತ್ತಪುರದಲ್ಲಿ ಕುಷ್ಠರೋಗಿಗಳಿಗಾಗಿ ಆದರ್ಶ ಆರೋಗ್ಯಧಾಮ ಆರಂಭವಾಯಿತು. ಅಷ್ಟೇ ಅಲ್ಲ, ಮಹಿಳಾಶ್ರಮ, ಲಕ್ಷ್ಮೀನಾರಾಯಣ ಮಂದಿರ, ಗೀತಾಮಂದಿರ, ಗ್ರಾಮೋದ್ಯೋಗ ಕೇಂದ್ರ, ಗೋಸೇವಾ ಕೇಂದ್ರ, ಹೀಗೆ ಅನೇಕ ಸಂಸ್ಥೆಗಳು... ಮುಂದೆ ಬ್ರಹ್ಮವಿದ್ಯಾ ಮಂದಿರವನ್ನೂ ಸ್ಥಾಪಿಸಿದರು. ವಿನೋಬಾರಿಗೆ ಸಮಾಜಸೇವೆ ಮತ್ತು ಅಧ್ಯಾತ್ಮ ಎರಡೂ ಅತ್ಯಗತ್ಯ ಸಂಗತಿಗಳಾಗಿದ್ದವು.

1936ರಲ್ಲಿ ಗಾಂಧೀಜಿಯೂ ವರ್ಧಾ ಸಮೀಪದ ಸೇವಾಗ್ರಾಮದಲ್ಲಿ ಬಂದು ನೆಲೆಸಿದ ಮೇಲೆ ವರ್ಧಾ ಕುಟೀರಗಳು ಭಾರತದ ಮಧ್ಯಬಿಂದುವೆನಿಸಿದವು. ಸ್ವರಾಜ್ಯ ಸಂಗ್ರಾಮದ ರಾಜಧಾನಿ ಎಂಬ ಹೆಸರುಗಳಿಸಿದ್ದವು. ಸ್ವಲ್ಪಕಾಲದ ನಂತರ ವಿನೋಬಾ ವರ್ಧಾದಿಂದ ಹನ್ನೆರಡು ಮೈಲಿ ದೂರವಿರುವ ಪವನಾರ್‌ಗೆ ಬಂದು ನೆಲೆಸಿದರು.

ಪರಂಧಾಮ ಆಶ್ರಮದಲ್ಲಿ ಒಮ್ಮೆ ವಿನೋಬಾ ಜಮೀನನ್ನು ಅಗೆಯುತ್ತಿದ್ದಾಗ ಪಿಕಾಸಿಗೆ ಒಂದು ಕಲ್ಲು ತಾಗಿತು. ಇನ್ನಷ್ಟು ಅಗೆದು ನೋಡಿದಾಗ ಆ ಕಲ್ಲು ಸ್ವಲ್ಪ ದೊಡ್ಡದಾಗಿದೆಯೆಂದು ಕಂಡು ಬಂತು. ಇತರರೂ ಬಂದರು. ಎಲ್ಲಾ ಸೇರಿ ಎತ್ತಿದಾಗ ಕಂಡು ಬಂದಿದ್ದು ಭರತ, ರಾಮರ ಮಿಲನದ ಸುಂದರ ಶಿಲ್ಪ. ಅದನ್ನು ಕಂಡು ವಿನೋಬಾ ಗದ್ಗದಿತರಾದ ಆ ಅಮೃತಕ್ಷಣದಲ್ಲಿ